## ಕಪ್ಪೆ ದೇವಾಲಯ

ಭಾರತ ದೇಶವು ಕೌತುಕಗಳ ತಾಣ. ಇದಕ್ಕೆ ಸಾಕ್ಷಿ ಉತ್ತರ ಪ್ರದೇಶದ ಲಖಿಂಪುರದಿಂದ 12 ಕಿ.ಮೀ. ದೂರದಲ್ಲಿರುವ ಓಯಲ್ ಎಂಬ ಗ್ರಾಮದಲ್ಲಿನ ಕಪ್ಪೆ ದೇವಾಲಯ ಅಥವಾ 'ಮಂಡೂಕ ಮಂದಿರ'. ಲಖಿಂಪುರ ಮತ್ತು ಸೀತಾಪುರದ ಮಧ್ಯೆ ಓಯಲ್ ಇದೆ. 1860–1870 ರಲ್ಲಿ ರಜಪೂತ ರಾಜ ಭಖುತ್ ಸಿಂಗ್ ಈ ದೇವಾಲಯ ಕಟ್ಟಿಸಿದ. ಕಪ್ಪೆಯ ಕೃಪೆಯಿಂದ ರಾಜನಿಗೆ ಮತ್ತು ಇಡೀ ಸಾಮ್ರಾಜ್ಯಕ್ಕೆ ಒಳಿತಾಗಿದ್ದರಿಂದ ಕಪ್ಪೆಯ ಬೆನ್ನಿನ ಮೇಲೆ ಕಟ್ಟಲಾಗಿರುವ ಇದು ಮೂಲತಃ ಶಿವನ ದೇವಾಲಯ. ಕಪ್ಪೆ ತನ್ನ ಬೆನ್ನ ಮೇಲೆ ಇಡೀ ದೇವಾಲಯದ ಭಾರ ಹೊತ್ತಂತೆ ಕಾಣುತ್ತದೆ. ಶಿವರಾತ್ರಿ, ದೀಪಾವಳಿ, ಶ್ರಾವಣದಲ್ಲಿ ಭಕ್ತರು ಇಲ್ಲಿ ಹೆಚ್ಚಾಗಿ ಬರುತ್ತಾರೆ.

**-ಈರಣ್ಣ ಬೆಂಗಾಲಿ, ರಾಯಚೂರು**





## ಪ್ರಳಯದ ಹಲ್ಲಿಗಳು

16 ಮತ್ತು 17ನೇ ಶತಮಾನದಲ್ಲಿ ಕೆಳದಿ ಅರಸರು ಇಕ್ಕೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಸಾಗರ ತಾಲೂಕಿನ ಒಂದು ಸಣ್ಣ ಹಳ್ಳಿ ಈ ಇಕ್ಕೇರಿ. ಅರಸರ ಆಳ್ವಿಕೆಯ ಗತವೈಭವದ ನೆನಪಾಗಿ ಉಳಿದದ್ದು ಅಘೋರೇಶ್ವರ ದೇವಾಲಯ ಮಾತ್ರ. ಇದು ಏಕ ಕೂಟ ರಚನೆಯಾಗಿದ್ದು ದೊಡ್ಡದಾದ ಗರ್ಭಗೃಹ, ಅಂತರಾಳ ಮತ್ತು ವಿಶಾಲ ನವರಂಗಗಳನ್ನು ಹೊಂದಿದೆ. ಇಲ್ಲಿ ಕೆಳದಿಯ ವಾಸ್ತು ಶೈಲಿಯಲ್ಲಿ ದೇವಸ್ಥಾನವನ್ನು ಕಟ್ಟಲಾಗಿದೆ. ದೇವಸ್ಥಾನದ ಹೊರ ಕಲ್ಲಿನ ಗೋಡೆಯ ಮೇಲೆ ವಿವಿಧ ಪೌರಾಣಿಕ ದೃಶ್ಯಗಳು, ಕುಸುರಿ ಕೆತ್ತನೆಗಳು ನೋಡುಗರ ಮನ ಸೆಳೆಯುತ್ತವೆ. ಹಾಗೆ ಕಲ್ಲಿನ ಮೇಲೆ ಎರಡು ಹಲ್ಲಿಗಳನ್ನು ಕೆತ್ತಲಾಗಿದೆ. ಎರಡೂ ಹಲ್ಲಿಗಳು ಸಂಧಿಸದಂತೆ ಮಧ್ಯದಲ್ಲಿ ಗೆರೆ ಹಾಕಲಾಗಿದ್ದು ಪಕ್ಕದಲ್ಲಿ ಒಂದು ಚೇಳನ್ನೂ ಕೆತ್ತಲಾಗಿದೆ. ಹಲ್ಲಿ ಒಂದಕ್ಕೊಂದು ಮುಟ್ಟಿದಾಗ ಪ್ರಳಯವಾಗುತ್ತದೆ. ಅಲ್ಲಿರುವ ಚೇಳು ಅದನ್ನು ತಡೆಯುತ್ತದೆ ಎಂಬ ಪ್ರತೀತಿ ಇದೆ. ಇದು ಕಲಾವಿದನ ಕಲ್ಪನೆ ಇರಬಹುದು.

**ಚಿತ್ರ-ಬರಹ: ಗಣಪತಿ ಕಂಚಿಪಾಲ ತೇಲಂಗಾರ, ಯಲ್ಲಾಪುರ**

## ದೇವಾಲಯ ಜೀರ್ಣೋದ್ಧಾರಕ

ಬಸವೇಶ್ವರ ಸಂಸ್ಥೆಯ ಮೂಲ ಸಂಸ್ಥಾಪಕರಾಗಿ ಧಾರ್ಮಿಕ ಕಾರ್ಯ ಮಾಡಿದವರು ಲಿಂ. ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರು. (1884 –1962) ಮೂಲತಃ ಬಸವನ ಬಾಗೇವಾಡಿ ತಾಲ್ಲೂಕಿನ ಅಮೀನಗಡದವರು. ತಾವೂ ದೇಣಿಗೆ ನೀಡಿ ದಾನಿಗಳಿಂದ ಕಾಣಿಕೆ ಸಂಗ್ರಹಿಸಿ ವಿವಿಧ ಬಗೆಯ ಕಟ್ಟಡ ನಿರ್ಮಿಸಿ ಬಾಗೇವಾಡಿಯ ಬಸವೇಶ್ವರ ದೇವಾಲಯಕ್ಕೆ ಮೆರಗು ತಂದವರು. ಮಾಮಲೇದಾರ್ ಹುದ್ದೆಯಿಂದ ನಿವೃತ್ತಿ ಹೊಂದಿದ ನಂತರ ಅತೀ ಹೆಚ್ಚು ಸಮಯವನ್ನು ಬಸವೇಶ್ವರ ದೇವಾಲಯ ಜೀರ್ಣೋದ್ಧಾರಕ್ಕಾಗಿ ತಮ್ಮ ಸೇವೆ ಮುಡುಪಾಗಿಟ್ಟರು. ಇವರ ನಿಸ್ವಾರ್ಥ ಸೇವೆ ಗುರುತಿಸಿ ಬ್ರಿಟಿಷ್ ಸರಕಾರ 'ರಾವ್ ಸಾಹೇಬ' ಬಿರುದು ನೀಡಿತು. ಬಸವನ ಬಾಗೇವಾಡಿಯ ಬಸವೇಶ್ವರ ದೇವಾಸ್ಥಾನದ ಆವರಣದಲ್ಲಿ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯವರು ಅವರ ಮೂರ್ತಿ ನಿರ್ಮಿಸಿ ಗೌರವಿಸಿದ್ದಾರೆ.

**-ಮನೀಷಾ ಪಾಟೀಲ, ವಿಜಯಪುರ**

